





# ಆಹಾ.. ನಾಣ್ಯ ಜೋಡಣೆ ಕಲೆ!

ನಾಣ್ಯಗಳನ್ನು ಒಂದರ ಮೇಲೆ ಮತ್ತೊಂದನ್ನು ಇಡುತ್ತಾ ಬನ್ನಿ. ಒಂದು ಹಂತವನ್ನು ತಲುಪಿದ ನಂತರ, ಅದರ ಮೇಲೆ ನಾಣ್ಯವನ್ನಿರಿಸುವುದು ಸಖತ್ ಸವಾಲಿನ ಕೆಲಸ. ಆದರೆ ಜಪಾನ್ ದೇಶದ ಟಾನಿ ಎಂಬಾತನಿಗೆ ಸಾವಿರಾರು ನಾಣ್ಯಗಳನ್ನು ಬಲು ನಾಜೂಕಾಗಿ ಪೇರಿಸುವುದು ಮಕ್ಕಳಾಟದಂತೆ ಬಲು ಸಲೀಸು. ಭೌತಶಾಸ್ತ್ರ ನಿಯಮಗಳನ್ನು ಬಿಂಬಿಸುವ ರೀತಿಯಲ್ಲಿ ನಾಣ್ಯಗಳ ರಚನೆಗಳನ್ನು ಮಾಡುವುದು ಈತನಿಗೆ ಬಲು ಪ್ರಿಯವಾದ ಹವ್ಯಾಸ.

ಟ್ವಿಟರ್ ಅಕೌಂಟ್ ಹೊಂದಿರುವ ಟಾನಿಗೆ ಅಭಿಮಾನಿಗಳ ಸಂಖ್ಯೆ ಸಹಸ್ರಾರು. ಹಲವಾರು ಗಂಟೆಗಳನ್ನು ವ್ಯಯಿಸಿ ಈತ ಬೀಳಲು ಸಿದ್ಧವಾಗಿದೆಯೇನೋ ಎನ್ನುವಂತೆ ತೋರುವ ಕ್ರೇಜಿ ಡಿಜೈನ್ ಗಳ ಫೋಟೊಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡುತ್ತಿದ್ದನಂತೆ. ಈತನ ಕೆಲವೊಂದು ನಾಣ್ಯ ರಚನೆಗಳು ಹತ್ತು ಸಾವಿರಕ್ಕೂ ಹೆಚ್ಚು ಲೈಕ್ ಗಳನ್ನು ಪಡೆದಿವೆಯಂತೆ. ಬಾಗಿದ ಚಮಚದ ಮೇಲೆ ಎತ್ತರವಾಗಿರುವ ಕಾಯಿನ್ ಗುಡ್ಡೆ, ನಾಣ್ಯದ ಮೇಲೆ ಗೋಲಿಯನ್ನಿರಿಸಿ ಅದರ ಮೇಲೆ ನಾಣ್ಯ ಜೋಡಣೆಯಂತೂ ಗೋಂದು ಬಳಸಿರಬಹುದೆಂಬ ಅನುಮಾನಕ್ಕೆ ಎಡೆ ಮಾಡಿಕೊಡುತ್ತವೆ. ಆದರೆ ಈತ ವೀಡಿಯೊ ಒಂದರಲ್ಲಿ, ನಾಣ್ಯ ರಚನೆಯನ್ನು ನಿರ್ಮಿಸಿ ಅದನ್ನು ಬೀಳಿಸಿ, ತಾನು ಎಲ್ಲಿಯೂ ಗೋಂದನ್ನು ಬಳಸಿಲ್ಲವೆಂದು ಸಾಬೀತುಪಡಿಸಿದ್ದಾನೆ.

ನೂರಾರು ನಾಣ್ಯಗಳನ್ನು ಎಚ್ಚರಿಕೆಯಿಂದ ಪೇರಿಸುತ್ತಾ ರಚನೆಗಳನ್ನು ಮಾಡುವಾಗ ಬಹಳಷ್ಟು ಏಕಾಗ್ರತೆ ಹಾಗೂ ಸ್ವ ನಿಯಂತ್ರಣ ಬೇಕಾಗುತ್ತದೆ. ಕೇವಲ ಒಂದೇ ಒಂದು ಸಣ್ಣ ಕೈ ನಡುಕವು ಕೂಡಾ ಇಡೀ ರಚನೆಯನ್ನು ಬೀಳಿಸುತ್ತದೆ ಎಂದು ಟಾನಿ ಹೇಳುತ್ತಾನೆ. 38,000 ಕ್ಕೂ ಹೆಚ್ಚಿರುವ ಟಾನಿಯ ಟ್ವಿಟರ್ ಅಭಿಮಾನಿಗಳು ಈತನ ಮುಂದಿನ ನಾಣ್ಯ ರಚನೆ ಏನಿರಬಹುದೆಂದು ಕುತೂಹಲದಿಂದ ಕಾಯುತ್ತಿರುತ್ತಾರಂತೆ. ಈತನ ನಾಣ್ಯ ಜೋಡಣೆಗಳು ಜಪಾನಿನ ಹಲವಾರು ವೆಬ್ ಸೈಟ್ ಮತ್ತು ಬ್ಲಾಗ್ ಗಳಲ್ಲಿ ಪ್ರದರ್ಶಿತವಾಗಿವೆ. ಕಳೆದ ವರ್ಷದ ಕೊನೆಯಲ್ಲಿ ಇಂಟರ್ ನ್ಯಾಷನಲ್ ಮಾಧ್ಯಮದಲ್ಲಿಯೂ ಕೂಡ ಟಾನಿಯ ಕೆಲವು ನಾಣ್ಯ ಜೋಡಣೆ ರಚನೆಗಳು ವೈರಲ್ ಆಗಿವೆ. ಒಟ್ಟಿನಲ್ಲಿ ಟಾನಿಯ ಕಲಾತ್ಮಕ ನಾಣ್ಯ ಜೋಡಣೆಗಳು ಎಲ್ಲರನ್ನೂ ವಿಸ್ಮಿತಗೊಳಿಸುತ್ತಿರುವುದಂತೂ ಸತ್ಯವಾದ ಮಾತು.

■ ಪ್ರಿಯಾಂಕ ವಿ.ಹೆಚ್.